O.S. ನಂಬರಃ 68/2017

ಪಿ. ಡಬ್ಲ್ಯೂಃ 2

ದಿಃ 02-11-2023 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ.ಜಿ.ಎನ್.ಎನ್.ವಕೀಲರಿಂದ</u>

ನಾನು ಪಿಯುಸಿ ವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಅಲ್ಪಸಲ್ಪ ಬರುತ್ತದೆ. ನಾನು ಸ್ಟೀಲ್ ಪಾತ್ರೆ ಅಂಗಡಿ ವ್ಯವಹಾರ ಮಾಡುತ್ತಿದ್ದೇನೆ. ನಾನು ಅಂಜುಮನ್ ಸಂಸ್ಥೆಯ ಸದಸ್ಯನಿದ್ದೇನೆ, ಒಂದು ಸಾರಿ ಅಡಹಾಕ ಕಮಿಟಿಯ ಸದಸ್ಯನೆಂದು ನೇಮಕ ಹೊಂದಿದ್ದೆ. 2016 ರಿಂದ 2018 ರವರೆಗೆ ಅಡಹಾಕ ಕಮಿಟಿಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಅಡಹಾಕ ಕಮಿಟಿಗೆ 16-ಜನ ನೇಮಕ ಹೊಂದಿದ್ದರು. ಸದರಿ 16-ಜನರ ಹೆಸರು ನೆನಪಿಲ್ಲ. ಸದರಿ 16-ಜನ ನಮಗೆ ಬೇಕಾದ ಹಾಗೂ ಸ್ನೇಹಿತರು ಇದ್ದರು ಎಂದರೆ ಸಾಮಾನ್ಯವಾಗಿ ಆಯ್ಕೆಯಾಗಿದ್ದರು ಎಂದು ಹೇಳುತ್ತಾರೆ. 16-ಜನರ ಕಮಿಟಿಯನ್ನು ವಕ್ಫ ಬೋರ್ಡಿಗೆ ಹೆಸರು ನೀಡಿ ನಾವೇ ಮಾಡಿಕೊಂಡು ಬಂದ ಪಟ್ಟಿ ಎಂದರೆ ಸರಿಯಲ್ಲ.

ವಾದಿ ನನಗೆ ಸ್ನೇಹಿತ ಎಂದರೆ ಪರಿಚಯದವರು ಎಂದು ಹೇಳುತ್ತಾರೆ. ನನ್ನ ಮೇಲೆ ಅಂಜುಮನ್ ಸಂಸ್ಥೆಯ ವಿಚಾರವಾಗಿ ಎದುರು ಪ್ರಕರಣದಲ್ಲಿ ಆರೋಪಿ ಎಂದು ತೋರಿಸಿದ್ದಾರೆ, ಅದು ಬಿಟ್ಟರೆ ಬೇರೆ ಪ್ರಕರಣ ಇಲ್ಲ. ನನ್ನ ಸಹೋದರರ ಮೇಲೆ ಕ್ರಿಮಿನಲ್

ಕೇಸ್ ಇರಬಹುದು, ಮಾಹಿತಿ ಇಲ್ಲ. ನನ್ನ ಸಹೋದರರು ಅಂಜುಮನ್ ಪ್ರಕರಣ ಹೊರತುಪಡಿಸಿ ಬೇರೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂದರೆ ಸರಿ. ನಾವು ನೇಮಕವಾಗುವ ಪೂರ್ವದಲ್ಲಿ ಇದ್ದ ಕಮಿಟಿ ಹಣ ದುರುಪಯೋಗ ಮಾಡಿದೆ ಎಂದು ಲೋಕಾಯುಕ್ತಕ್ಕೆ ಅರ್ಜಿ ನೀಡಿದ್ದೆ. ಸದರಿ ಅರ್ಜಿ ಮೇಲೆ ಅಪೀಲು ಹೈಕೋರ್ಟನಲ್ಲಿ ಪೆಂಡಿಂಗ್ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು 3 ಲಕ್ಷ ರೂ. ಹಣ ತುಂಬಿ ಅಪೀಲು ಮಾಡಿದ್ದಾರೆ ಎಂದು ಹೇಳುತ್ತಾರೆ.

ಸದರಿ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಅಡಹಾಕ ಕಮಿಟಿ ನೇಮಕಗೊಂಡಾಗ ಶಿಕ್ಷಣ ಇಲಾಖೆಯವರು ಸಂಶುದ್ದೀನ್ ಇಸ್ಮಾನ್ ಶೇಖರವರನ್ನು ಅಂಕೋಲಾ ಅಂಜುಮನ್ ಸಂಸ್ಥೆಯ ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದರು. ಈ ಕುರಿತು ಅಂಜುಮನ್ ಸಂಸ್ಥೆಯ ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದಾರೆಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಅಂಜುಮನ್ ಸಂಸ್ಥೆಗೆ ಸಂಶುದ್ದೀನ್ ರವರನ್ನು ಒಳಗೊಂಡ 14-ಜನರನ್ನು ಆಡಳಿತ ಸಲಹೆಗಾರರನ್ನಾಗಿ ನೇಮಿಸಿದ್ದಾರೆಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. 16-ಜನರನ್ನು ಅಡಹಾಕ ಕಮಿಟಿ ಸದಸ್ಯರನ್ನಾಗಿ ನೇಮಿಸಿದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅವಧಿಯಲ್ಲಿ ಸಹ ಹಣ ದುರುಪಯೋಗವಾಗಿದೆಯೆಂದು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಹಿಂದಿನ ಆಡಳಿತ ಕಮಿಟಿಗೆ 3 ನೇ ಪ್ರತಿವಾದಿ ಸಹಾಯ ಮಾಡುತ್ತಿದ್ದರೆಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಪ್ರಕಟವಾದ ಅಂಜುಮನ್ ಸಂಸ್ಥೆಯ ಜಾಹೀರಾತನ್ನು ದಿಃ 03-10-2016 ರಂದು ಓದಿದ್ದೇನೆ. ಅಡಹಾಕ ಕಮಿಟಿ ಸದಸ್ಯರು ಕಳ್ಳರು, ಅಹತಿ ಹದೀಸ, ಟೆರರೀಸಮ್, ಭಯೋತ್ಪಾದನೆ ಗ್ರೂಪಿಗೆ ಸೇರಿದವರು ಎಂದು ಬರೆದಿದ್ದರು. ಅದರಲ್ಲಿ ಸಧ್ಯದ ಸಲಹಾ ಕಮಿಟಿಯ ಸದಸ್ಯರು ಎಂದು ಬರೆದಿದ್ದು, ಹೆಸರು ನಮೂದಿಸಿರಲಿಲ್ಲ. ಅಹತಿ ಹದೀಸ ಇದು ಭಯೋತ್ಪಾದನೆ ಸಂಘಟನೆಗೆ ಸೇರಿದ್ದು ಎಂದು ನಮ್ಮ ಬಳಿ ಅಧೀಕೃತ ದಾಖಲೆ ಇಲ್ಲ, ಆದರೆ ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ ಆ ರೀತಿ ಬರೆದಿದೆ.

ಈಗ ನೋಡುತ್ತಿರುವ ನಿಪಿ-4 ರ ಪ್ಯಾರಾ ನಂಬರ 3 ರಲ್ಲಿ ಸಲಹಾ ಸಮಿತಿಯ ಸದಸ್ಯರನ್ನಾಗಿ ಜಿಲ್ಲಾ ವಕ್ಫ ಬೋರ್ಡ ಅಧ್ಯಕ್ಷ ಕಯಾಮ್ ಮುಗುದ್ ಹಳಿಯಾಳ, ಶೇಖ ಅಲಿ ಮಹಮ್ಮದ್ ಸಾಲಿಯಾ ಹಾಗೂ ಮಹಮ್ಮದ್ ಅಷಾ ಆಗಾ ರವರು ಅಡಹಾಕ ಸಮಿತಿಯ ಸದಸ್ಯರಲ್ಲ ಎಂದರೆ ಶೇಖ ಅಲಿ ಮಹಮ್ಮದ್ ಸಾಲಿಯಾ ನಮ್ಮ ಸಮಿತಿಯ ಸದಸ್ಯರಿದ್ದರು ಎಂದು ಹೇಳುತ್ತಾರೆ. ಶೇಖ ಅಲಿ ಮಹಮ್ಮದ್ ಸಾಲಿಯಾ ಅಡಹಾಕ ಕಮಿಟಿಯ ಸದಸ್ಯರಲ್ಲೊಬ್ಬ ಎಂದು ತೋರಿಸಲು ದಾಖಲೆ ನೀಡಲಾಗಿದೆ. ಶೇಖ ಅಲಿ ಮಹಮ್ಮದ್ ಸಾಲಿಯಾ ರವರು ಮಾನಹಾನಿ ದಾವೆ ಅಥವಾ ಕ್ರಿಮಿನಲ್ ಪ್ರಕರಣ ಸಲ್ಲಿಸಿಲ್ಲ ಎಂದರೆ ಸರಿ.

ನಾವು ಅಹತಿ ಹದಿಸ್ ಭಯೋತ್ಪಾದನೆ ಸಂಘಟನೆಗೆ ಸೇರಿದವರೆಂದು ನಮ್ಮ ಬಗ್ಗೆ ಪತ್ರಿಕೆಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಅಡಹಾಕ ಕಮಿಟಿಯ ಸದಸ್ಯರ ಹೆಸರನ್ನು

ನಮೂದಿಸಿಲ್ಲ ಎಂದರೆ ಸಾಕ್ಷಿ, ಕಮಿಟಿ ಕುರಿತಾಗಿ ಬರೆದಿದ್ದಾರೆಂದು ಹೇಳುತ್ತಾರೆ. ಸಾಕ್ಷಿ ನಿಪಿ-4 ನ್ನು ನೋಡಿ ಅದರಲ್ಲಿ ಪ್ರಪ್ರತ್ಯೇಕವಾಗಿ ಹೆಸರು ಹಾಗೂ ನಮ್ಮ 16-ಜನರ ಕಮಿಟಿ ಅಹತಿ ಹದಿಸ್ ಗೆ ಸೇರಿದೆ ಎಂದು ನಮೂದಿಸಿಲ್ಲ ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ಮೂರು ಜನರ ಸಲಹಾ ಸಮಿತಿ ಕುರಿತಾಗಿ ನಮೂದಿದೆ ಹೊರತು 16-ಜನರ ಕಮಿಟಿ ಕುರಿತಾಗಿ ನಮೂದಿಲ್ಲ ಎಂದರೆ ಸರಿ.

ಅಂಜುಮನ್ ಸಂಸ್ಥೆಗೆ ಚುನಾವಣೆ ನಡೆಯಬೇಕೆಂದು ಸಲಹಾ ಸಮಿತಿಗೆ ಅರ್ಜಿ ನೀಡಲು ಬಂದಿದ್ದರ ಕುರಿತು ನಿಪಿ-4 ಪ್ರಕಟಣೆಯಾಗಿದೆ ಎಂದರೆ ಸರಿಯಲ್ಲ. ಪತ್ರಿಕೆಗೆ ಪ್ರಕಟಣೆ ಸಲುವಾಗಿ 3 ನೇ ಪ್ರತಿವಾದಿ ನಿಪಿ-4 ರಂತೆ ಮಾಹಿತಿ ನೀಡಿದ್ದಾನೆ. ಪತ್ರಿಕಾ ಪ್ರಕಟಣೆಯಲ್ಲಿ 3 ನೇ ಪ್ರತಿವಾದಿ ಮಾಹಿತಿ ನೀಡಿದ್ದಾನೆಂದು ನಿಪಿ-4 ರಲ್ಲಿ ಬರೆದಿದೆ. ಸದರಿ ಪ್ರಕಟಣೆಯನ್ನು 3 ನೇ ಪ್ರತಿವಾದಿ ನೀಡಿದ್ದಾನೆಂದು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-4 ಆಧರಿಸಿ ಪ್ರಕಟಣೆಗೆ ಮಾಹಿತಿಯನ್ನು 3 ನೇ ಪ್ರತಿವಾದಿ ನೀಡಿದ್ದಾನೆಂದು ಕಂಡುಕೊಂಡಿದ್ದೇವೆ ಎಂದರೆ ಸರಿ. 3 ನೇ ಪ್ರತಿವಾದಿಯನ್ನು ಹೊರತುಪಡಿಸಿ ನಿಪಿ-4 ರಲ್ಲಿ ಅರ್ಜಿ ನೀಡಲು ಬಂದ ಉಳಿದ ಸದಸ್ಯರ ಮೇಲೆ ದಾವೆ ಹಾಕಿಲ್ಲ ಎಂದರೆ ಆ ಕುರಿತು ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಮ್ಮ ವಿರುದ್ಧ ಯಾವುದೇ ಪ್ರಕಟಣೆ ಆಗದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಜುಮನ್ ಸಂಸ್ಥೆಗೆ ಚುನಾವಣೆ ಆಗಬೇಕೆಂದು ಅಹವಾಲು ನೀಡಲು ಬಂದಾಗ ಆದ ಪೇಪರ್ ಪ್ರಕಟಣೆಯಲ್ಲಿ ನಮ್ಮ ಕುರಿತು ಯಾವುದೇ ಮಾನಹಾನಿಕರ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿ ಸೃಷ್ಟಿಸಿದ್ದವು ಎಂದರೆ ಸರಿಯಲ್ಲ.

3 ನೇ ಪ್ರತಿವಾದಿ ವಿರುದ್ಧ ಚೆಕ್ ಬೌನ್ಸ ಪ್ರಕರಣವಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಜಿಲ್ಲಾ ವಕ್ಫ ಬೋರ್ಡಿಗೆ ಹಾಗೂ ಮುನ್ಸಿಪಾಲಿಟಿಗೆ ನಾಮ ನಿರ್ದೇಶಿತ ಸದಸ್ಯ ಎಂದರೆ ಸರಿ. ಸಮಾಜ ಸೇವೆ ಮಾಡುವವರಿಗೆ ನಾಮ ನಿರ್ದೇಶಿತ ಮಾಡುತ್ತಾರೆ ಎಂದರೆ ಈಗ ನಾಮಿನೆಟ್ ಆಗಿರುತ್ತಾರೆ, ಆದರೆ ಆ ಸಮಯದಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಸಮಾಜಸೇವೆ ಮಾಡುವವರಿಗೆ ಜನ ಬೆಂಬಲಿಸುತ್ತಾರೆ ಎಂದರೆ ಸರಿಯಲ್ಲ. ನಮ್ಮ ಅವಧಿ ಪೂರ್ಣಗೊಂಡ ನಂತರ ಚುನಾವಣೆಗೆ ನಾನು ಹಾಗೂ ಇತರರು ಸ್ಪರ್ಧಿಸಿದ್ದರು. ಸದರಿ ಚುನಾವಣೆಯಲ್ಲಿ ನಾನು ಪರಾಭವಗೊಂಡಿದ್ದೇನೆ. ನನ್ನ ವ್ಯಕ್ತಿತ್ವ ನೋಡಿ ಪರಾಭವಗೊಳಿಸಿದ್ದಾರೆ ಎಂದರೆ ಸರಿಯಲ್ಲ.

ನಿಪಿ-4 ರಲ್ಲಿ ಬರೆದ ವಿಷಯ ತಪ್ಪು ಕಲ್ಪನೆಯಿಂದ ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಓದಿ ಹೇಳಿದಾಗ ಅವರು ಈ ದಾವೆ ಹಾಕಿರುತ್ತಾರೆಂದರೆ ಸರಿ. ವಾದಿಗೆ ತಪ್ಪು ಮಾಹಿತಿ ನೀಡಿ ದಾವೆ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಿಂದ 3 ನೇ ಪ್ರತಿವಾದಿಗೆ ಮಾನಸಿಕ ಹಿಂಸೆ ಆಗಿದೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.